**<u>ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ</u>**

**<u>ಸಿಸಿ ನಂಃ 51/2016</u>**

**<u>ಸಿಡಬ್ಲೂಃ12 .ಪಿ ಡಬ್ಲ್ಯೂಃ9</u>**

**ಹೆಸರುಃ ನೇಮನಗೌಡ**

**ತಂದೆ ಹೆಸರುಃ ಶಿದ್ಧನಗೌಡ ಕಂಠೇಪ್ಪಗೌಡ್ರ**

**ವಯಸ್ಸುಃ 60 ವರ್ಷಗಳು.**

**ಉದ್ಯೋಗಃ ವ್ಯವಸಾಯ**

**ವಾಸ ಸ್ಥಳಃ ಹಿರೇಬೂದಿಹಾಳ.**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 25/10/2024.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಚಾಸಾಃ1 ರಿಂದ 7, 9, 13, 23, 24, 27 ರಿಂದ 30, 35, 36, ರವರು ನನಗೆ ಗೊತ್ತಿಲ್ಲ. ಚಾಸಾಃ8, 10, 11, 14 ರಿಂದ 22, 25, 26, 31 ರಿಂದ 34 ರವರ ಪರಿಚಯ ಇದೆ. ಆರೋಪಿ 1, 4 ರಿಂದ 6, 8 ರಿಂದ 12 ಮತ್ತು 14ರವರು ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಆರೋಪಿಗಳ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದು, ಆರೋಪಿನ ಗುರುತಿಗೆ ಯಾವುದೇ ತಕರಾರು ಇರುವುದಿಲ್ಲ ಅಂತ ತಿಳಿಸಿರುತ್ತಾರೆ. ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ</u>**

1. ಇಂಗಳಗಿ ಗ್ರಾಮ ಪಂಚಾಯತ ನಮ್ಮ ಹಿರೇಬೂದಿಹಾಳ ಗ್ರಾಮ ಪಂಚಾಯತಿಗೆ ಸೇರಿರುತ್ತದೆ. ಇಂಗಳಗಿ ಗ್ರಾಮ ಪಂಚಾಯತಿ ಇವರಿಂದ ಉದ್ಯೋಗ ಖಾತ್ರಿ ಯೋಜನೆ ಪ್ರಾರಂಭಿಸಿದ್ದು ಆ ಕಾಲಕ್ಕೆ ಹಿರೇಬೂದಿಹಾಳ ಗುರುವಿನಹಳ್ಳಿ ರಸ್ತೆ ನಿರ್ಮಾಣ ಮಾಡಿದ್ದು ಆ ಕೆಲಸಕ್ಕೆ ನಾನು ಮತ್ತು ನನ್ನ ಹೆಂಡತಿ ಶೈಲಾ ಇನ್ನುಳಿದ ಕೂಲಿಕಾರ್ಮಿಕರೊಂದಿಗೆ ಕೂಲಿ ಕೆಲಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಇನ್ನು ಅನೇಕ ಜನರು ಕೆಲಸ ಮಾಡಿರುತ್ತಾರೆ, 2010 ನೇ ಇಸ್ವಿಯಲ್ಲಿ ಇಂಗಳಗಿ ಗ್ರಾಮ ಪಂಚಾಯತಿಯಲ್ಲಿ 2009-2010 ನೇ ಸಾಲಿನಲ್ಲಿ ಎಮ್ ಎ ನದಾಫ ಎಂಬುವವರು ಕಾರ್ಯದರ್ಶಿ ಅಂತ ಕ್ಲರ್ಕ ಎಂದು ಶಂಕರಪ್ಪ ಸಂಗಣ್ಣನವರ, ನೀಲವ್ವ ಭದ್ರಾಪುರ ಎಂಬ ಅಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇದಾದ ನಂತರ 2010-2011 ನೇ ಸಾಲಿನಲ್ಲಿ ಪಂಚಾಯತ ಚುನಾವಣೆ ಆದಾಗ 2 ನೇ ಆರೋಪಿ ಮಮ್ತಾಜ ಬೇಗಂ ಸದಸ್ಯರು ಅಧ್ಯಕ್ಷರು ಅಂತ ಆಯ್ಕೆ ಮಾಡಿದ್ದು ಇರುತ್ತದೆ ಮತ್ತು ಪಿಡಿಓ ಅಂತ ನಾಗೇಶ ಶೆಟ್ಟನ್ನವರ ಕಾರ್ಯದರ್ಶಿ ಅಂತ ಎ ಎಮ್ ನದಾಫ, ಕ್ಲರ್ಕ ಶಂಕ್ರಪ್ಪ ಸಂಗಣ್ಣನವರ ಇದ್ದು ಇವರು ಕೂಲಿ ಕೆಲಸ ಮಾಡಿದ ಕೇಲವು ಕೂಲಿಕಾರರ ಖಾತೆಗಳು ಬ್ಯಾಂಕಿನಲ್ಲಿ ಇರುವುದಿಲ್ಲ, ಅವರಿಗೆ ಕೂಲಿ ಹಣ ಕೊಡಬೇಕಾಗುತ್ತದೆ, ಆದ್ದರಿಂದ ನಿಮ್ಮ ಉಳಿತಾಯ ಖಾತೆಯ ಪಾಸ್ ಪುಸ್ತಕ ನಂಬರ ಕೊಡಿ ಅಂತ ಕೇಳಿ ನನ್ನ ಬ್ಯಾಂಕಿನ ಖಾತೆಯ ಉಳಿತಾಯ ಖಾತೆಯ ನಂಬರ ಮತ್ತು ಪಾಸ್ ಬುಕ್ಕನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಉದೋಗ್ಯ ಖಾತ್ರಿ ಯೋಜನೆಯಡಿಯಲ್ಲಿ ಕೂಲಿಕಾರರ ಹಾಜರಾತಿ ಪಟ್ಟಿಯನ್ನು ಶಂಕ್ರಪ್ಪ ಸಂಗಣ್ಣನವರ ಇವರು ತಯಾರಿಸಿದ್ದು ಅದರ ನಂಃ700 ಇದ್ದು ಇದರಲ್ಲಿ ನನ್ನ ಹೆಸರು ಅ.ನಂಃ59 ಕ್ಕೆ ಬರೆದು ಜಾಬ್ ಕಾರ್ಡನ ನಂಃ119 ಮುಂದೆ ನನ್ನ ಹೆಸರು ನಮೂದಿಸಿ ಮುಂದೆ ಕೂಲಿ ಹಣ ರೂ 700/- ಕೊಟ್ಟಂತೆ ನಮೂದಿಸಿದ್ದು ಮತ್ತು ಹಣ ಮುಟ್ಟಿದೆ ಅಂತ ಕೂಲಿ ಪಟ್ಟಿಯಲ್ಲಿ ಸಹಿ ಮಾಡಿರುವುದು ಖೊಟ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ನನ್ನ ಹೆಂಡತಿಯ ಹೆಸರಿನ ಮುಂದೆಯೂ ಎಸ್ ಎನ್ ಕೆ ಅಂತ ಖೊಟ್ಟಿ ಸಹಿ ಇರುತ್ತದೆ ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿಯಲ್ಲಿ ಹಣವನ್ನು ಚೆಕ್ಕ ನಂಃ943503 ದಿಃ07.09.2010 ರಂದು ಮೊತ್ತ ರೂ 55,900/- ಇದ್ದು, ಈ ಹಣವನ್ನು ಜಮಾ ಮಾಡಬೇಕು ಅಂತ ಈ ಚೆಕ್ಕಿನ ಸಂಗಡ ಬ್ಯಾಂಕಿಗೆ ಕೊಟ್ಟ ಲಿಸ್ಟನಲ್ಲಿ ಅ.ನಂಃ1 ಕ್ಕೆ ಸೋಮಣಗೌಡ ಶಿ ಕಂಠೇಪ್ಪಗೌಡ್ರ ಅಂತ ಹೆಸರು ನನ್ನ ಅಕೌಂಟ ನಂಃ8360 ಅಂತ ಬರೆಯಲಾಗಿ ಈ ಲಿಸ್ಟ ಪ್ರಕಾರ ರೂ 5100/- ಜಮಾ ಮಾಡಲಾಗಿ ಪಂಚಾಯತ ಇವರು ಬರೆಯಲಾಗಿ ಈ ಹಣ ನನ್ನ ಅಕೌಂಟ

ಸ್ಟೇಟಮೆಂಟನಲ್ಲಿ ನೋಡಿದಾಗ ದಿಃ13.10.2010 ರಂದು ಜಮೆಯಾಗಿದ್ದು ಇರುತ್ತದೆ ಎಂದರೆ ಸರಿಯಲ್ಲ. ಅಧ್ಯಕ್ಷರಾದ ಮಮ್ತಾಜಬೇಗಂ, ಪಿಡಿಓ ಶೆಟ್ಟನ್ನವರ ಇವರ ಸಹಿ ಇರುತ್ತದೆ ಎಂದರೆ ಸರಿಯಲ್ಲ. ಇನ್ನುಳಿದ ಕೂಲಿಕಾರರು ದುಡಿದ ಹಣವನ್ನು ನನ್ನ ಖಾತೆಗೆ ಜಮಾ ಆಗಿದ್ದು ಇರುತ್ತದೆ, ಅಂತ ಹೇಳಿ ಶಂಕ್ರಪ್ಪ ಸಂಗಣ್ಣನವರ ಇವರು ಬ್ಯಾಂಕಿಗೆ ಬಂದು ಹಣ ತೆಗೆಸಿ ನನ್ನ ಕೂಲಿ ಹಣವಾದ ರೂ 1400/-ವನ್ನು ಮುರಿದುಕೊಂಡು ರೂ 3700/- ಹಣವನ್ನು ಶಂಕ್ರಪ್ಪ ಸಂಗಣ್ಣನವರ ಇವರ ಕೈಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷರಾದ ಮಮ್ತಾಜಬೇಗಂ, ಪಿಡಿಓ ಶೆಟ್ಟನವರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 3,700/- ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ16 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 51/2016**

**ಸಿಡಬ್ಲೂಃ13 .ಪಿ ಡಬ್ಲ್ಯೂಃ10**

**ಹೆಸರುಃ ಲಿಂಗರಾಜ**

**ತಂದೆ ಹೆಸರುಃ ಯಲ್ಲಪ್ಪ ಕೂಸಮ್ಮನವರ**

**ವಯಸ್ಸುಃ 55 ವರ್ಷಗಳು.**

**ಉದ್ಯೋಗಃ ವ್ಯವಸಾಯ**

**ವಾಸ ಸ್ಥಳಃ ಇಂಗಳಗಿ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 25/10/2024.**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾಃ1, 3, 4, 5, 7, 8, 10, 11, 15, ರಿಂದ 30, 32 ರಿಂದ 36 ರವರು ನನಗೆ ಗೊತ್ತಿಲ್ಲ. ಚಾಸಾಃ2, 6, 9, 12, 14, 18, 26, 31 ರವರ ಪರಿಚಯ ಇದೆ. ಆರೋಪಿ 1, 4 ರಿಂದ 6, 9 ರಿಂದ 12 ಮತ್ತು 14 ರವರು ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಆರೋಪಿಗಳ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದು, ಆರೋಪಿನ ಗುರುತಿಗೆ ಯಾವುದೇ ತಕರಾರು ಇರುವುದಿಲ್ಲ ಅಂತ ತಿಳಿಸಿರುತ್ತಾರೆ. ಆರೋಪಿ 8 ಮತ್ತು 15 ರವರ ಪರಿಚಯ ಇರುತ್ತದೆ. ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ಇಂಗಳಗಿ ಗ್ರಾಮ ಪಂಚಾಯತ ನಮ್ಮ ಹಿರೇಬೂದಿಹಾಳ ಗ್ರಾಮ ಪಂಚಾಯತಿಗೆ ಸೇರಿರುತ್ತದೆ. ಇಂಗಳಗಿ ಗ್ರಾಮ ಪಂಚಾಯತಿ ಇವರಿಂದ ಉದ್ಯೋಗ ಖಾತ್ರಿ ಯೋಜನೆ ಪ್ರಾರಂಭಿಸಿದ್ದು ಆ ಕಾಲಕ್ಕೆ ಹಿರೇಬೂದಿಹಾಳ ಗುರುವಿನಹಳ್ಳಿ ರಸ್ತೆ ನಿರ್ಮಾಣ ಮಾಡಿದ್ದು ಆ ಕೆಲಸಕ್ಕೆ ನಾನು ಮತ್ತು ನನ್ನ ಹೆಂಡತಿ ಶೈಲಾ ಇನ್ನುಳಿದ ಕೂಲಿಕಾರ್ಮಿಕರೊಂದಿಗೆ ಕೂಲಿ ಕೆಲಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಇನ್ನು ಅನೇಕ ಜನರು ಕೆಲಸ ಮಾಡಿರುತ್ತಾರೆ, 2010 ನೇ ಇಸ್ವಿಯಲ್ಲಿ ಇಂಗಳಗಿ ಗ್ರಾಮ ಪಂಚಾಯತಿಯಲ್ಲಿ 2009-2010 ನೇ ಸಾಲಿನಲ್ಲಿ ಎಮ್ ಎ ನದಾಫ ಎಂಬುವವರು ಕಾರ್ಯದರ್ಶಿ ಅಂತ ಕ್ಲರ್ಕ ಎಂದು ಶಂಕರಪ್ಪ ಸಂಗಣ್ಣನವರ, ನೀಲವ್ವ ಭದ್ರಾಪುರ ಎಂಬ ಅಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇದಾಾದ ನಂತರ 2010-2011 ನೇ ಸಾಲಿನಲ್ಲಿ ಪಂಚಾಯತ ಚುನಾವಣೆ ಆದಾಗ 2 ನೇ ಆರೋಪಿ ಮಮ್ತಾಜ ಬೇಗಂ ಸದಸ್ಯರು ಅಧ್ಯಕ್ಷರು ಅಂತ ಆಯ್ಕೆ ಮಾಡಿದ್ದು ಇರುತ್ತದೆ ಮತ್ತು ಪಿಡಿಓ ಅಂತ ನಾಗೇಶ ಶೆಟ್ಟನ್ನವರ ಕಾರ್ಯದರ್ಶಿ ಅಂತ ಎ ಎಮ್ ನದಾಫ, ಕ್ಲರ್ಕ ಶಂಕ್ರಪ್ಪ ಸಂಗಣ್ಣನವರ ಇದ್ದು ಇವರು ಕೂಲಿ ಕೆಲಸ ಮಾಡಿದ ಕೇಲವು ಕೂಲಿಕಾರರ ಖಾತೆಗಳು ಬ್ಯಾಂಕಿನಲ್ಲಿ ಇರುವುದಿಲ್ಲ, ಅವರಿಗೆ ಕೂಲಿ ಹಣ ಕೊಡಬೇಕಾಗುತ್ತದೆ, ಆದ್ದರಿಂದ ನಿಮ್ಮ ಉಳಿತಾಯ ಖಾತೆಯ ಪಾಸ್ ಪುಸ್ತಕ ನಂಬರ ಕೊಡಿ ಅಂತ ಕೇಳಿ ನನ್ನ ಬ್ಯಾಂಕಿನ ಖಾತೆಯ ಉಳಿತಾಯ ಖಾತೆಯ ನಂಬರ ಮತ್ತು ಪಾಸ್ ಬುಕ್ಕನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಉದ್ಯೋಗ್ಯ ಖಾತ್ರಿ ಯೋಾಜನೆಯಡಿಯಲ್ಲಿ ಕೂಲಿಕಾರರ ಹಾಜರಾತಿ ಪಟ್ಟಿಯನ್ನು ಶಂಕ್ರಪ್ಪ ಸಂಗಣ್ಣನವರ ಇವರು ತಯಾರಿಸಿದ್ದು ಅದರ ನಂಃ700 ಇದ್ದು ಇದರಲ್ಲಿ ನನ್ನ ಹೆಸರು ಅ.ನಂಃ33 ಕ್ಕೆ ಬರೆದು ಜಾಬ್ ಕಾರ್ಡನ ನಂಃ360 ಮುಂದೆ ನನ್ನ ಹೆಸರು ನಮೂದಿಸಿ ಮುಂದೆ ಕೂಲಿ ಹಣ ರೂ 700/- ಕೊಟ್ಟಂತೆ ನಮೂದಿಸಿದ್ದು ಮತ್ತು ಹಣ ಮುಟ್ಟಿದೆ ಅಂತ ಕೂಲಿ ಪಟ್ಟಿಯಲ್ಲಿ ಸಹಿ ಮಾಡಿರುವುದು ಖೊಟ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ನನ್ನ ಹೆಸರಿನ ಮುಂದೆ ಖೊಟ್ಟಿ ಸಹಿ ಇರುತ್ತದೆ ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿಯಲ್ಲಿ ಹಣವನ್ನು ಚೆಕ್ಕ ನಂಃ943503 ದಿಃ07.09.2010 ರಂದು ಮೊತ್ತ ರೂ 55,900/- ಇದ್ದು, ಈ ಹಣವನ್ನು ಜಮಾ ಮಾಡಬೇಕು ಅಂತ ಈ ಚೆಕ್ಕಿನ ಸಂಗಡ ಬ್ಯಾಂಕಿಗೆ ಕೊಟ್ಟ ಲಿಸ್ಟನಲ್ಲಿ ಅ.ನಂಃ2 ಕ್ಕೆ ನನ್ನ ಹೆಸರು ಮತ್ತು ನನ್ನ ಅಕೌಂಟ ಅಂತ ಬರೆಯಲಾಗಿ ಈ ಲಿಸ್ಟ ಪ್ರಕಾರ ರೂ 5,100/- ಜಮಾ ಮಾಡಲಾಗಿ ಪಂಚಾಯತ ಇವರು ಬರೆಯಲಾಗಿ ಈ ಹಣ ನನ್ನ ಅಕೌಂಟ ಸ್ಟೇಟಮೆಂಟನಲ್ಲಿ ನೋಡಿದಾಗ ದಿಃ13.10.2010 ರಂದು ಜಮೆಯಾಗಿದ್ದು ಇರುತ್ತದೆ ಎಂದರೆ ಸರಿಯಲ್ಲ. ಅಧ್ಯಕ್ಷರಾದ ಮಮ್ತಾಜಬೇಗಂ, ಪಿಡಿಓ

ಶೆಟ್ಟನ್ನವರ ಇವರ ಸಹಿ ಇರುತ್ತದೆ ಎಂದರೆ ಸರಿಯಲ್ಲ. ಇನ್ನುಳಿದ ಕೂಲಿಕಾರರು ದುಡಿದ ಹಣವನ್ನು ನನ್ನ ಖಾತೆಗೆ ಜಮಾ ಆಗಿದ್ದು ಇರುತ್ತದೆ, ಅಂತ ಹೇಳಿ ಶಂಕ್ರಪ್ಪ ಸಂಗಣ್ಣನವರ ಇವರು ಬ್ಯಾಂಕಿಗೆ ಬಂದು ಹಣ ತೆಗೆದು ಕೊಡಲು ಕೇಳಿದ್ದು ಆ ಪ್ರಕಾರ ನಾನು ರೂ 5,100/- ರೂಪಾಯಿಯನ್ನು ತೆಗೆದು ಶಂಕ್ರಪ್ಪನ ಕೈಯಲ್ಲಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷರಾದ ಮಮ್ತಾಜಬೇಗಂ, ಪಿಡಿಓ ಶೆಟ್ಟನವರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 5,100/- ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ17 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**